# ಸಣ್ಣ ಆದಾಯ ದೊಡ್ಡ ಹೃದಯ

ಅಂಕಿತಾ ಠಾಕೂರ್ ಛತ್ತೀಸ್‌ಘಡದ ರಾಯ್‌ಗಡ್ ಜಿಲ್ಲೆಯ ಪುಸ್ಸೋರ್ ತಹಸೀಲಿನ ಖಾಸಗಿ ಆಂಗ್ಲ ಮಾಧ್ಯಮ ಶಾಲೆಯ 12ನೇ ತರಗತಿಯ ವಿದ್ಯಾರ್ಥಿನಿ. ಅವರ ಮನೆಯಲ್ಲಿ ಅವಳು ಶಾಲೆಗೆ ಹೋಗುತ್ತಿರುವ ಎರಡನೇ ತಲೆಮಾರಿನವಳು. ಅವಳ ತಾಯಿಯ ಹೆತ್ತವರು ದಿನಗೂಲಿ ಕಾರ್ಮಿಕರು. ಆಕೆಯ ತಾಯಿ ವಿಶೇಷ ಶಿಕ್ಷಣದಲ್ಲಿ (Special Education) ಬಿ.ಎಡ್. ಪದವಿ ಪಡೆದಿದ್ದಾರೆ. ಈಗ ವಿಶೇಷ ಶಿಕ್ಷಣದಲ್ಲಿ ಬ್ಲಾಕ್ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವಳ ತಂದೆ ಪದವೀಧರರಾಗಿದ್ದು, ಖಾಸಗಿ ಕಂಪನಿಯಲ್ಲಿ ದಿನಗೂಲಿಗೆ ಕೆಲಸ ಮಾಡುತ್ತಿದ್ದಾರೆ.

ಅಂಕಿತಾಳ ಆಸಕ್ತಿಯ ವಿಷಯ ಜೀವವಿಜ್ಞಾನ. ಹಿಂದೆ ಅವಳ ಹೆತ್ತವರು ಆಕೆ ಶಿಕ್ಷಕಿಯಾಗುವುದನ್ನೇ ಆಯ್ಕೆ ಮಾಡುತ್ತಾಳೆ ಅಂದುಕೊಂಡಿದ್ದರು. ಓರ್ವ ಮಹಿಳಾ ವೈದ್ಯರ ಪರಿಚಯವಾದ ನಂತರ ಅಂಕಿತಾ ಎಂ.ಬಿ.ಬಿ.ಎಸ್. ಮತ್ತು ಬಿ.ಡಿ.ಎಸ್. ಕೋರ್ಸುಗಳ ಪ್ರವೇಶಕ್ಕಿರುವ ವೈದ್ಯಕೀಯ ಪ್ರವೇಶ ಪರೀಕ್ಷೆಯಾದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (National Eligibility cum Entrance Test -NEET) ಬರೆಯಲು ತೀರ್ಮಾನಿಸಿದಳು. ಅಂಕಿತಾ ಉತ್ತಮ ವಿದ್ಯಾರ್ಥಿನಿ. ಹತ್ತನೇ ತರಗತಿಯ ಮಂಡಳಿ ಪರೀಕ್ಷೆಯಲ್ಲಿ ಶೇಕಡಾ 80 ಅಂಕ ಗಳಿಸಿದ್ದಳು. ಇದು ಅವಳ ಶಾಲಾಭ್ಯಾಸದ ನಿರ್ಣಾಯಕವಾದ ಅಂತಿಮ ವರ್ಷದ ಘಟ್ಟ. ಅದರ ಜೊತೆಗೆ ವೈದ್ಯಕೀಯ ಪ್ರವೇಶ ಪರೀಕ್ಷೆ ತೇರ್ಗಡೆಯಾಗಬೇಕಾದ ಒತ್ತಡವೂ ಸೇರಿಕೊಂಡಿತ್ತು. ನಾವು  ಕೋವಿಡ್ ಪಿಡುಗಿನ ಪೂರ್ವದ ಮತ್ತು ನಂತರದ ಸಂದರ್ಭದ ಅವಳ ಸಿದ್ಧತೆ ಹಾಗು ದೈನಂದಿನ ಬದುಕಿನಲ್ಲಿ ಆಗಿರುವ ಬದಲಾವಣೆಗಳನ್ನು ಕುರಿತು ಕೇಳಿದೆವು.

ಈ ವರ್ಷ ಅಂಕಿತಾ ಕಠಿಣ ಶ್ರಮ ವಹಿಸುತ್ತಾ, ಅಧ್ಯಯನದಲ್ಲಿ ಕಟ್ಟುನಿಟ್ಟಾದ ವೇಳಾಪಟ್ಟಿಯನ್ನು ಪಾಲಿಸುತ್ತಿದ್ದಾಳೆ. ಬೆಳಗ್ಗೆ 7.30ರಿಂದ ಮಧ್ಯಾಹ್ನ 1.30ರ ತನಕ ತರಗತಿಗೆ ಹಾಜರಾಗುತ್ತಾಳೆ. ಮನೆಗೆ ಬಂದು ಮೂರು ಗಂಟೆ ಸ್ವತಃ ಕಲಿಯುತ್ತಾಳೆ. ಮತ್ತೆರಡು ಗಂಟೆ ಭೌತ ಮತ್ತು ರಸಾಯನ ವಿಜ್ಞಾನದಲ್ಲಿ ಮನೆಪಾಠ ಪಡೆದುಕೊಳ್ಳುತ್ತಾಳೆ.

ಏಪ್ರಿಲ್ ತಿಂಗಳ ಮೊದಲ ವಾರ ಶಾಲೆಯಿಂದ ವಾಟ್ಸ್ಯಾಪ್‌ನಲ್ಲಿ ವಿದ್ಯಾರ್ಥಿಗಳಿಗೆ ಸಂದೇಶ ಬಂದಿತು. ಪ್ರತಿದಿನ ಬೆಳಗ್ಗೆ 10ರಿಂದ 12 ಗಂಟೆಯವರೆಗೆ ಎರಡು ಗಂಟೆ ತಾವು ಆನ್‌ಲೈನ್ ತರಗತಿ ತೆಗೆದುಕೊಳ್ಳುತ್ತೇವೆ ಎನ್ನುವುದೇ ಆ ಸಂದೇಶ. ಮನೆಯಲ್ಲಿ ಇದ್ದದ್ದೇ ಒಂದು ಸ್ಮಾರ್ಟ್‌ಫೋನ್. ಅದನ್ನು ತಾಯಿ ತಮ್ಮ ಕಾರ್ಯ–ಕ್ಷೇತ್ರದಲ್ಲಿ ಕೆಲಸಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಈಗ ಅವರಿಗೆ ಮನೆಯಿಂದಲೇ ಕೆಲಸ ನಿರ್ವಹಿಸಲು ಆ ಸ್ಮಾರ್ಟ್‌ಫೋನ್ ಬೇಕಾಗಿತ್ತು. ಹಾಗಾಗಿ ಅವರು ಇನ್ನೊಂದು ಸ್ಮಾರ್ಟ್‌ಫೋನ್ ಕೊಂಡುಕೊಂಡರು. ಅಂಕಿತಾಳಿಗೆ 8ನೇ ತರಗತಿಯಲ್ಲಿ ಓದುತ್ತಿರುವ ತಮ್ಮನೂ ಇದ್ದಾನೆ. ಅವನೂ ಆನ್‌ಲೈನ್ ತರಗತಿಗೆ ಹಾಜರಾಗಬೇಕಾಗಿತ್ತು. ಹೀಗಿದ್ದರೂ ಈ ಮೂವರೂ ಎರಡು ಮೊಬೈಲ್ ಫೋನ್‌ಗಳಲ್ಲಿ ತಮ್ಮ ಕಾರ್ಯಗಳನ್ನು ಹೇಗೋ ನಿಭಾಯಿಸಿಕೊಳ್ಳುತ್ತಿದ್ದರು.

ನೀಟ್ ಪರೀಕ್ಷೆಗೆ ತಯಾರಿ ನಡೆಸುವುದಕ್ಕೆ ಕೂಡ ಅಂಕಿತಾಳಿಗೆ ಸ್ಮಾರ್ಟ್‌ಫೋನ್‌ನ ಅಗತ್ಯವಿತ್ತು. ನೀಟ್‌ಗಾಗಿ ಆಕೆ ಆನ್‌ಲೈನ್ ತರಬೇತಿ ಪಡೆಯಲು ಸೇರಿಕೊಂಡಿದ್ದು, ಪ್ರತಿದಿನ ಎರಡು ಗಂಟೆ ತರಗತಿ ನಡೆಯುತ್ತಿತ್ತು. ತರಬೇತಿ ಕೇಂದ್ರದ ಅಧ್ಯಾಪಕರು ಆನ್‌ಲೈನ್ ಮಾಧ್ಯಮವನ್ನು ಬಳಸುವುದರಲ್ಲಿ ಹೆಚ್ಚು ಪರಿಣತರಾಗಿದ್ದರು ಎಂದು ಆಕೆ ಹೇಳುತ್ತಾಳೆ. ಉಳಿದಂತೆ ಅವಳ ಶಾಲೆಯ ಅಧ್ಯಾಪಕರಿಗೆ ಅದನ್ನು ಅತ್ಯಂತ ಕಷ್ಟದಿಂದ ಕಲಿಯಬೇಕಾಗಿತ್ತು. ಮೊದಲಿಗೆ ಆನ್‌ಲೈನ್ ತರಗತಿಗಳು ಅಸಂಬದ್ಧವಾಗಿರುತ್ತಿದ್ದವು. ಆದರೆ ಅಧ್ಯಾಪಕರು ಪ್ರತಿಯೊಂದು ಮಗುವೂ ಹೊಂದಿದ್ದ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಶ್ರಮಿಸಿದ್ದರು. ಈಗ ಅವರು ಈ ಮಾಧ್ಯಮದಲ್ಲಿ ಪಳಗಿದವರಾಗಿದ್ದು, ತರಗತಿಗಳು ಅತ್ಯಂತ ಸುಗಮವಾಗಿ ಸಾಗುತ್ತಿವೆ.

ಈಗ ತನ್ನ ಸ್ನೇಹಿತರು ಮತ್ತು ಅಧ್ಯಾಪಕರನ್ನು, ಅದರಲ್ಲೂ ತುಂಬಾ ಚೆನ್ನಾಗಿ ಪಾಠ ಮಾಡುವ, ಪ್ರಯೋಗಾಲಯದಲ್ಲಿ ಪ್ರಯೋಗ ಮಾಡುತ್ತಾ ಪರಿಕಲ್ಪನೆಗಳನ್ನು ವಿವರಿಸುವ ಭೌತವಿಜ್ಞಾನ ಅಧ್ಯಾಪಕರನ್ನು ಮತ್ತೆ ನೋಡಬೇಕೆಂದು ಮನಸ್ಸಾಗುತ್ತಿದೆ ಎನ್ನುತ್ತಿದ್ದಾಳೆ. ಈಗ ಆನ್‌ಲೈನ್ ತರಗತಿಗಳಲ್ಲಿ ಪ್ರಯೋಗಗಳಿಲ್ಲ. ತರಗತಿಗಳಲ್ಲಿ ಸಂದೇಹ ಪರಿಹರಿಸಿಕೊಳ್ಳುವುದು ಸುಲಭವಾಗಿತ್ತು ಎನ್ನುತ್ತಾಳೆ ಆಕೆ. ಈಗ ಅನೇಕ ಅಧ್ಯಾಪಕರು ಸಂದೇಹ ಪರಿಹಾರದ ತರಗತಿಯನ್ನು ಭಾನುವಾರ ಇಟ್ಟುಕೊಳ್ಳುತ್ತಿದ್ದಾರೆ. ವಾರದಲ್ಲಿ ಚರ್ಚಿಸಿದ ಪಠ್ಯಗಳ ಕುರಿತ ನಿರ್ದಿಷ್ಟ ಸಂದೇಹಗಳನ್ನು ಸ್ಪಷ್ಟಪಡಿಸಿಕೊಳ್ಳುವುದು ಇದರ ಉದ್ದೇಶ. ಶಾಲೆಯಲ್ಲಿ ಆಗಾಗ ಕಿರುಪರೀಕ್ಷೆಗಳು ನಡೆಯುತ್ತಿದ್ದುದರಿಂದ ಅವಳ ಪ್ರಗತಿ ಅವಳಿಗೆ ಗೊತ್ತಾಗುತ್ತಿತ್ತು ಎನ್ನುತ್ತಾಳೆ. ಆದರೆ ಈಗ ಅಧ್ಯಾಪಕರು ಪ್ರಶ್ನೆಪತ್ರಿಕೆ ಕಳುಹಿಸಿ ಪರೀಕ್ಷೆ ಮಾಡಿ, ಆನ್‌ಲೈನ್‌ನಲ್ಲೇ ಉತ್ತರ ಪತ್ರಿಕೆಗಳನ್ನು ತಿದ್ದಲು ಪ್ರಯತ್ನ ಮಾಡುತ್ತಿದ್ದರೂ ತನ್ನ ನಿರ್ವಹಣೆ ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ ಎನ್ನುತ್ತಿದ್ದಾಳೆ. ಆನ್‌ಲೈನ್ ಪರೀಕ್ಷೆಯಿಂದ ತನ್ನ ಸಾಧನೆಯ ಪೂರ್ಣಚಿತ್ರವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಆಗುತ್ತಿಲ್ಲ ಎನ್ನುವುದು ಅಂಕಿತಾಳ ಆತಂಕವಾಗಿದೆ.

ಅವಳ ತರಗತಿಯ ಎಲ್ಲ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗೆ ಸೇರುವುದಕ್ಕೆ ಸಾಧ್ಯವಾಗಿದೆಯೇ? ಇಲ್ಲ. ಒಬ್ಬ ಹುಡುಗಿ ಬಳಿ ಸ್ಮಾರ್ಟ್‌ಫೋನ್ ಇಲ್ಲ. ಖರೀದಿಸುವ ಸಾಮರ್ಥ್ಯವೂ ಇಲ್ಲದವಳು, ಹಾಗಾಗಿ ಶಾಲೆ ಅರ್ಧಕ್ಕೆ ನಿಲ್ಲಿಸಿದಳು. ಆಕೆಗೆ ಒಂದೇ ಒಂದು ತರಗತಿಗೂ ಹಾಜರಾಗಲು ಸಾಧ್ಯವಾಗಲೇ ಇಲ್ಲ. ಆದರೆ ಅಧ್ಯಾಪಕರು ಪ್ರೋತ್ಸಾಹದ ಮಾತನಾಡಿ ಲಾಕ್‌ಡೌನ್ ಹಿಂತೆಗೆದ ನಂತರ ಶಾಲೆಗೆ ಪ್ರತಿದಿನ ಬರಲು ಹೇಳಿದರು. ಅಲ್ಲಿ ನೇರವಾಗಿ ಕಲಿಯಬಹುದು ಎಂದು ಹೇಳಿದ್ದಾರೆ. ಆದರೆ ಅಂಕಿತಾಗೆ ಈ ಹುಡುಗಿಯದ್ದೇ ಚಿಂತೆ. ಅವಳು ತಮ್ಮಲ್ಲಿರುವ ಎರಡು ಫೋನ್‌ಗಳಲ್ಲಿ ಒಂದನ್ನು ಅವಳಿಗೆ ಕೊಡಲು ತಾಯಿಯಲ್ಲಿ ಕೇಳಿಕೊಳ್ಳಲು ನಿರ್ಧರಿಸಿದ್ದಾಳೆ. ಆಕೆಗೆ ಒಂದು ಫೋನ್ ಕೊಟ್ಟರೆ ನಿನಗೇನು ಮಾಡುತ್ತೀಯಾ ಎಂದು ನಾವು  ಕೇಳಿದೆವು. ಅವಳು ಉತ್ತರವಾಗಿ ನಮ್ಮ ಮನೆಯಲ್ಲಿ ಒಂದು ಹಳೆಯ ಟ್ಯಾಬ್ಲೆಟ್ ಬಳಕೆ ಆಗದೇ ಹಾಗೆಯೇ ಉಳಿದುಕೊಂಡಿದೆ. ಅದನ್ನು ರಿಪೇರಿ ಮಾಡಿಸಿ ಉಪಯೋಗಿಸುತ್ತೇನೆ ಎಂದಳು.

**ಲರ್ನಿಂಗ್ ಕರ್ವ್‌ಗೆ ಹೇಳಿದಂತೆ**.

---

ಅನುವಾದ: **ಚಂದ್ರಶೇಖರ್ ಮಂಡೆಕೋಲು**
ಪರಿಶೀಲನೆ: **ಮಂಜುನಾಥ್ ಎಸ್.ವಿ**